ಕಾಲೇಜು ಶಿಕ್ಷಣ ಇಲಾಖೆ
ಕರ್ನಾಟಕ ಸರ್ಕಾರ
Department of Collegiate Education
Government of Karnataka

ಸಂಖ್ಯೆ: ಕಾಶಿಇ/ಮಾತಂವಿ/27/ಲ್ಯಾಪ್‌ಟಾಪ್/2017-18

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ.
ಬೆಂಗಳೂರು, ದಿನಾಂಕ: 08.11.2017

**ಸುತ್ತೋಲೆ**

ವಿಷಯ : ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ.ಜಾ/ಪ.ಪಂಗಡದ ಪ್ರಥಮ ಪದವಿ ವಿದ್ಯಾರ್ಥಿಗಳಿಗೆ ಇ-ಕಂಟೆಟ್ ತುಂಬಿಸಿದ ಲ್ಯಾಪ್‌ಟಾಪ್‌ಗಳನ್ನು ಕಲಿಕಾ ಸಾಮಗ್ರಿಯಾಗಿ ಒದಗಿಸುವ ಬಗ್ಗೆ

ಉಲ್ಲೇಖ: 1. ಸರ್ಕಾರದ ಆದೇಶ ಸಂಖ್ಯೆ: ಇಡಿ 4 ಹೆಚ್‌ಪಿಸಿ 2017, ಬೆಂಗಳೂರು ದಿ. 18/02/2017, 21/03/2017, 27/03/2017.

2. ಈ ಕಛೇರಿ ಸುತ್ತೋಲೆ ಸಂಖ್ಯೆ: ಕಾಶಿಇ/ಮಾತಂವಿ/42/ಲ್ಯಾಪ್‌ಟಾಪ್/16-17 ದಿನಾಂಕ:04/04/2017, 05/08/2017, 11/10/2017, 31/10/2017

>>><<

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ, ಕುಟುಂಬದ ವಾರ್ಷಿಕ ವರಮಾನ ರೂ.2.50 ಲಕ್ಷಗಳಿಗಿಂತ ಕಡಿಮೆ ಇರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅರ್ಹ ವಿದ್ಯಾರ್ಥಿಗಳಿಗೆ ಇ-ಕಂಟೆಟ್ ತುಂಬಿಸಿದ ಲ್ಯಾಪ್‌ಟಾಪ್‌ಗಳನ್ನು ಕಲಿಕಾ ಸಾಮಗ್ರಿಯಾಗಿ ಒದಗಿಸುವ ಸಂಬಂಧದಲ್ಲಿ, ಈ ಕೆಳಗಿನಂತೆ ಕ್ರಮಗಳನ್ನು ಅನುಸರಿಸುವಂತೆ ಪ್ರಾಂಶುಪಾಲರುಗಳಿಗೆ ಸೂಚನೆಯನ್ನು ನೀಡಲಾಗಿದೆ:

1. ಇಎಂಐಎಸ್‌ನಲ್ಲಿ ಅಪ್‌ಲೋಡ್ ಮಾಡಲಾಗಿರುವ ವಿದ್ಯಾರ್ಥಿ ಸಂಖ್ಯೆಯ ಆಧಾರದ ಮೇಲೆ ಕಾಲೇಜುಗಳಿಗೆ ಲ್ಯಾಪ್‌ಟಾಪ್‌ಗಳನ್ನು ಸರಬರಾಜು ಮಾಡಲಾಗಿರುತ್ತದೆ.
2. ಸೀಲ್ ಮಾಡಲಾದ ಲ್ಯಾಪ್‌ಟಾಪ್ ಕಾರ್ಟನ್ ಬಾಕ್ಸ್‌ಗಳನ್ನು ಕಾಲೇಜಿನಲ್ಲಿ ಸ್ವೀಕರಿಸಿದ ನಂತರದಲ್ಲಿ ಸರಬರಾಜುದಾರರ ಸರ್ವೀಸ್ ಇಂಜಿನಿಯರ್ ಮತ್ತು ಮೂರನೇ ಪಕ್ಷದ ಪರಿಶೀಲನಾ ಸಂಸ್ಥೆಯ ಇಂಜಿನಿಯರುಗಳು ಕಾಲೇಜಿಗೆ ಭೇಟಿ ನೀಡುವುದನ್ನು ನಿರೀಕ್ಷಿಸತಕ್ಕದ್ದು. ಕಾಲೇಜಿನ ಸಿಬ್ಬಂದಿಗಳು ಯಾವುದೇ ಕಾರಣಕ್ಕೂ ಸೀಲ್ ಮಾಡಲಾದ ಲ್ಯಾಪ್‌ಟಾಪ್ ಕಾರ್ಟನ್ ಬಾಕ್ಸ್‌ಗಳನ್ನು ತೆರೆಯತಕ್ಕದ್ದಲ್ಲ.
3. ಸರಬರಾಜುದಾರರ ಸರ್ವೀಸ್ ಇಂಜಿನಿಯರ್ ಲ್ಯಾಪ್‌ಟಾಪ್ ಕಾರ್ಟನ್ ಬಾಕ್ಸ್‌ಗಳನ್ನು ತೆರೆದು, ಎಲ್ಲಾ (100%) ಲ್ಯಾಪ್‌ಟಾಪ್‌ಗಳು ಸಮರ್ಪಕವಾಗಿ ಕರ್ತವ್ಯ ನಿರ್ವಹಿಸುತ್ತಿರುವ ಬಗ್ಗೆ ಪರೀಕ್ಷೆಗಳನ್ನು ಮಾಡಿ, ಲ್ಯಾಪ್‌ಟಾಪ್ ಸೀರಿಯಲ್ ಸಂಖ್ಯೆಯ ವಿವರಗಳನ್ನೊಳಗೊಂಡಂತೆ ಲ್ಯಾಪ್‌ಟಾಪ್ ಟೆಸ್ಟ್ ವರದಿಗಳನ್ನು ಕಾಲೇಜಿಗೆ ನೀಡುತ್ತಾರೆ. ಪ್ರಾಂಶುಪಾಲರು ಲ್ಯಾಪ್‌ಟಾಪ್ ಟೆಸ್ಟ್ ರಿಪೋರ್ಟ್‌ಗಳನ್ನು ಸಹಿ ಮಾಡಿ **ಸದರಿ ರಿಪೋರ್ಟ್ ಹಾಗೂ ನಿಗದಿಪಡಿಸಲಾದ ನಮೂನೆಯಲ್ಲಿ ಸಿದ್ಧಪಡಿಸಲಾದ ಸ್ಟಾಕ್ ಸರ್ಟಿಫಿಕೇಟ್‌ಗಳನ್ನು ಸರ್ವೀಸ್ ಇಂಜಿನಿಯರ್‌ಗಳಿಗೆ** ನೀಡತಕ್ಕದ್ದು. ಸದರಿ ದಾಖಲಾತಿಗಳನ್ನು ಸರ್ವೀಸ್ ಇಂಜಿನಿಯರ್ ಇಲಾಖೆಗೆ ಸಲ್ಲಿಸುತ್ತಾರೆ
4. ಮೂರನೇ ಪಕ್ಷದ ಪರಿಶೀಲನಾ ಸಂಸ್ಥೆಯ ಇಂಜಿನಿಯರುಗಳು ಇಲಾಖೆಯಿಂದ ನೀಡಲಾದ ಕಾರ್ಯಾದೇಶದ ಅನುಸಾರವಾಗಿ ಪೋಸ್ಟ್ ಡೆಲಿವರಿ ತಪಾಸಣೆಯನ್ನು ಕೈಗೊಂಡು ಲ್ಯಾಪ್‌ಟಾಪ್ ತಪಾಸಣಾ ವರದಿಯನ್ನು ಕಾಲೇಜಿಗೆ ಸಲ್ಲಿಸುತ್ತಾರೆ. ಪ್ರಾಂಶುಪಾಲರು ಸದರಿ ತಪಾಸಣಾ ವರದಿಗೆ ಸಹಿ ಮಾಡಿ ಮೂರನೇ ಪಕ್ಷದ ಪರಿಶೀಲನಾ ಸಂಸ್ಥೆಯ ಇಂಜಿನಿಯರುಗಳಿಗೆ ನೀಡತಕ್ಕದ್ದು. ಸದರಿ ವರದಿಯನ್ನು ಇಂಜಿನಿಯರ್ ಇಲಾಖೆಗೆ ಸಲ್ಲಿಸುತ್ತಾರೆ
5. ಈ ಮೇಲಿನ ಎರಡೂ ತಪಾಸಣೆಗಳು ಪೂರ್ಣಗೊಂಡ ನಂತರದಲ್ಲಿ ಸರಬರಾಜುದಾರರ ಸರ್ವೀಸ್ ಇಂಜಿನಿಯರ್ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿರುವುದಾಗಿ ವರದಿ ನೀಡಿರುವ ಲ್ಯಾಪ್‌ಟಾಪ್‌ಗಳನ್ನು ಕಾಲೇಜಿನ ದಾಸ್ತಾನು ಪುಸ್ತಕಕ್ಕೆ ಇಲಾಖಾ ವೆಬ್ ಸೈಟ್‌ನಲ್ಲಿ ಲಭ್ಯವಿರುವ ನಮೂನೆಯಲ್ಲಿ ದಾಸ್ತಾನು ತೆಗೆದುಕೊಳ್ಳುವುದು.
6. **ಇಲಾಖೆಯಿಂದ ಸೂಚನೆ ಸ್ವೀಕೃತವಾದ ನಂತರದಲ್ಲಿ ಮಾತ್ರ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ಹಂಚಿಕೆ ಮಾಡುವುದು.**

ಲ್ಯಾಪ್‌ಟಾಪ್‌ಗಳ ಹಂಚಿಕೆ ಬಗ್ಗೆ ಕಾಲಕಾಲಕ್ಕೆ ಇಲಾಖೆಯಿಂದ (ವೆಬ್‌ಸೈಟ್‌ನಲ್ಲಿ) ನೀಡಲಾಗುವ ಮಾಹಿತಿ ಹಾಗೂ ಸೂಚನೆಗಳನುಸಾರವಾಗಿ ಕ್ರಮ ಕೈಗೊಳ್ಳತಕ್ಕದ್ದು.

ಕಾಲೇಜು ಶಿಕ್ಷಣ ಆಯುಕ್ತರು

**ಇವರಿಗೆ,**
ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಎಲ್ಲಾ ಸರ್ಕಾರಿ ಪದವಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ

**ಪ್ರತಿಯನ್ನು,**
1. ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ, ಶಿವಮೊಗ್ಗ ಮತ್ತು ಗುಲ್ಬರ್ಗಾ- ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ.